ಓ.ಎಸ್‌ನಂ. 2162/2011 ಪಿ.ಡಬ್ಲ್ಯೂ-1

C/W

OS No.2161/2011

ಸಾಕ್ಷಿಯನ್ನು ದಿನಾಂಕ 19.11.2024 ರಂದು ಮದ್ಯಾಹ್ನ 3.30 ಕ್ಕೆ ಪುನಃ ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದು ಪಾಟೀ ಸವಾಲುಃ ಶ್ರೀ.DJ. ಪ್ರತಿವಾದಿ ಪರ ವಕೀಲರಿಂದಃ**

7. ಬ್ರಹ್ಮೇಶ್ ರವರು ಗುದ್ದಲಿ ಪೂಜೆಯನ್ನು ಮಾಡುತ್ತಿದ್ದಾಗ ನಾನು ಠಾಣೆಗೆ ಹೋದಾಗ ಪೊಲೀಸ್ ರು ಬ್ರಹ್ಮೇಶ್ ನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿರುತ್ತಾರೆ. ಬ್ರಹ್ಮೇಶ್ ರವರು ಕೇಸ್ ಹಾಕಿ ತಡೆಯಾಜ್ಞೆಯನ್ನು ಪಡೆದ ನಂತರ ಆ ತಡೆಯಾಜ್ಞೆಯನ್ನು ರದ್ದುಪಡಿಸುವಂತೆ ಕ್ರಮವನ್ನು ತೆಗೆದುಕೊಂಡಿದ್ದಿರಾ ಎಂದರೆ ಇಲ್ಲ, ತಡೆಯಾಜ್ಞೆ ರದ್ದು ಆಗಿರುವುದಿಲ್ಲ ಎನ್ನುತ್ತಾರೆ.

8. ದಾವಾ ಸಂಖ್ಯೆ 2161/2011 ರಲ್ಲಿ ಹಾಕಿರುವ ಪ್ರತಿವಾದ ಪತ್ರದಲ್ಲಿ ಕಾಣುವ ಸಹಿಯನ್ನು ಯಾರು ಹಾಕಿದ್ದು ಎಂದರೆ ನನ್ನ ತಂದೆ. ಬ್ರಹ್ಮೇಶ್ ರವರು ಕೇಸ್ ಹಾಕಿ ಸುಮಾರು 2 ವರ್ಷದ ಮೇಲೆ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆ ಎಂದು ನಮೂದು ಮಾಡಿದ್ದೇವೆ ಎಂದರೆ ಸರಿ. 2013 ರಲ್ಲಿ ಬ್ರಹ್ಮೇಶ್ ರವರ ಷೆಡ್ಯೂಲ್ ಸ್ವತ್ತಿನಲ್ಲಿ ಮನೆಯನ್ನು ಸಂಪೂರ್ಣವಾಗಿ ಕಟ್ಟಿ ಗೃಹ ಪ್ರವೇಶ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

9. ಅಸಲು ದಾವಾ ಸಂಖ್ಯೆ 2162/2011 ಅಂದರೆ ಸರಿದ ದಾವೆಯ ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಹೌದು. ಬ್ರಹ್ಮೇಶ್ ರವರು ಮನೆಯನ್ನು ಕಟ್ಟಿಕೊಂಡು ವಾಸವಾಗಿರುವ ಸ್ವತ್ತನ್ನು ನನ್ನ ಸ್ವತ್ತು ಎಂದು ನಾನು ಹೇಳುತ್ತಿದ್ದೇನೆ ಎಂದರೆ ಹೌದು. ನಾನು ದಾವೆಯನ್ನು ಹೂಡುವ ಮುಂಚೆ ಪೊಲೀಸ್ ದೂರು ನೀಡುವಾಗ ದೂರಿನಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KAMS030147022021/truecopy/order-2.pdf

ಬ್ರಹ್ಮೇಶ್ ಅಕ್ರಮವಾಗಿ ನನಗೆ ಸೇರಿದ ನಿವೇಶನದಲ್ಲಿ ಗುದ್ದಲಿ ಪೂಜೆ ಮಾಡುತ್ತಿದ್ದಾರೆ ಎಂದು ನಮೂದು ಮಾಡಿದ್ದೇನೆ ಎಂದರೆ ಹೌದು. ಪೊಲೀಸ್ ದೂರಿನಲ್ಲಿ ಬ್ರಹ್ಮೇಶ್ ಅಕ್ರಮವಾಗಿ ಕಟ್ಟಡ ಕಟ್ಟುತ್ತಿದ್ದಾರೆ ಅವರಿಂದ ಸ್ವಾಧೀನವನ್ನು ಕೊಡಿಸಿಕೊಡಿ ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ಹೌದು. ಬ್ರಹ್ಮೇಶ್ ರವರು ಗುದ್ದಲಿ ಪೂಜೆ ಮಾಡಿ ತೊಂದರೆ ನೀಡಿದ್ದಾರೆ ಎಂಬ ಬಗ್ಗೆ ಮತ್ತು ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ ಬಗ್ಗೆ ಮತ್ತು ಅದರ ಆಧಾರದ ಮೇಲೆ ಪೊಲೀಸ್ ರು ಇದು ಸಿವಿಲ್ ವ್ಯಾಜ್ಯ ನ್ಯಾಯಾಲಯಕ್ಕೆ ಹೋಗಿ ಎಂಬ ವಿಚಾರವನ್ನು ವಾದ ಪತ್ರದಲ್ಲಿ ಹೇಳಿದ್ದಿರಾ ಎಂದರೆ ಇಲ್ಲ. ಬ್ರಹ್ಮೇಶ್ ರವರು ಗುದ್ದಲಿ ಪೂಜೆ ಮಾಡುವ ಸಮಯದಲ್ಲಿ ನಿವೇಶದ ಸುತ್ತ ಕಾಂಪೌಂಡ್ ಗೋಡೆ ಹಾಕಿದ್ದರಾ ಅಥವಾ ತಂತಿ ಬೇಲಿ ಹಾಕಿದ್ದರಾ ಎಂದರೆ ಸಾಕ್ಷಿಯ ಕಾಂಪೌಂಡ್ ಗೋಡೆಯನ್ನು ನಾನು ಹಾಕಿದ್ದೆ ಎನ್ನುತ್ತಾರೆ. ಆ ಸಮಯದಲ್ಲಿ ದಾವಾ ಸ್ವತ್ತಿಗೆ ನಾನು ಕಾಂಪೌಂಡ್ ಗೋಡೆ ಹಾಕಿದ್ದೆ ಎಂದು ತೋರಿಸಲು ಪೋಟೊವನ್ನು ಹಾಜರು ಪಡಿಸಿದ್ದೇನೆ.

10. ನನ್ನ ವಾದ ಪತ್ರದಲ್ಲಿ ಬ್ರಹ್ಮೇಶ್ ಮುಳ್ಳುತಂತಿಯ ಬೇಲಿಯನ್ನು ಕಿತ್ತು ಹಾಕಿ ಆಗಾಗ್ಗೆ ನನಗೆ ತೊಂದರೆ ನೀಡುತ್ತಿದ್ದಾರೆ ಎಂದು ನಮೂದು ಮಾಡಿರುವುದು ಸರಿಯಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅರ್ದ ಭಾಗದ ನಿವೇಶನದಲ್ಲಿ ಕಾಂಪೌಂಡ್ ಗೋಡೆ ಇದ್ದು ಪ್ರವೇಶದ ಬಳಿ ಮುಳ್ಳು ತಂತಿಯ ಬೇಲಿ ಇತ್ತು ಎನ್ನುತ್ತಾರೆ. ಯಾವ ದಿಕ್ಕಿಗೆ ಕಾಂಪೌಂಡ್ ಗೋಡೆ ಇದೆ ಎಂದರೆ ಪಶ್ಚಿಮ ಮತ್ತು ಉತ್ತರ ದಿಕ್ಕಿನ ಕಡೆ ಕಾಂಪೌಂಡ್ ಗೋಡೆ ಹಾಕಿದ್ದೆ ಎನ್ನುತ್ತಾರೆ.

11. ನಾನು ಹೂಡಿದ ದಾವಾ ಸಂಖ್ಯೆ 2162/2011 ರಲ್ಲಿ ಬ್ರಹ್ಮೇಶ್ ರವರು ಗೃಹ ಪ್ರವೇಶ ಮಾಡಿ 4 ವರ್ಷಗಳ ಬಳಿಕ ನಾನು ವಾದ ಪತ್ರವನ್ನು ತಿದ್ದುಪಡಿ ಮಾಡಲು ಅರ್ಜಿಯನ್ನು ಹಾಕಿದ್ದೇನೆ ಎಂದರೆ ಸರಿ. ಮುಂದುವರೆದು ಬ್ರಹ್ಮೇಶ್ ಹಾಕಿದ್ದ ದಾವೆ ಬಾಕಿ ಇದ್ದ ಕಾರಣ ಅರ್ಜಿಯನ್ನು ತಡವಾಗಿ ಹಾಕಿರುತ್ತೇನೆ. ಬ್ರಹ್ಮೇಶ್ ರವರು ದಾವಾ ಸಂಖ್ಯೆ 2161/2011 ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸುತ್ತಿದ್ದಾರೆ ಎಂಬ ವಿಚಾರವನ್ನು ಅಸಲು ದಾವಾ ಸಂಖ್ಯೆ 2162/2011 ರಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಇಲ್ಲ. ನಾನು ಬ್ರಹ್ಮೇಶ್ ರವರ ವಿರುದ್ದ ದಾವೆ ಹೂಡಿದಾಗ ಕಟ್ಟಡ ಪ್ರಾರಂಭದ ಸ್ಥಿತಿಯಲ್ಲಿ ಇತ್ತು ಎಂದರೆ ಹೌದು. ನಾನು ದಾವಾ ಹೂಡುವಷ್ಟು ರಲ್ಲಿ ಬ್ರಹ್ಮೇಶ್ ರವರು ಪರವಾನಿಗೆ ಮತ್ತು ಪ್ಲಾನ್ ನ್ನು

This is a True Copy of the Court Records Online. Authenticated @ districts.ecourtsindia.com/cnr/KAMS030147022021/truecopy/order-2.pdf

ಪಡೆದುಕೊಂಡು ಮನೆ ಕಟ್ಟಿಸುತ್ತಿದ್ದರು ಎಂದರೆ ಹೌದು.

12. ಈಗ ಸಾಕ್ಷಿಗೆ ಒಂದು ಪೋಟೊವನ್ನು ತೋರಿಸಿ, ಅದರಲ್ಲಿ ಕಾಣುವ ಸ್ವತ್ತಿಗೆ ಸಂಬಂದಪಟ್ಟಂತೆ ನಾನು ದಾವೆಯನ್ನು ಹೂಡಿದ್ದೇನೆ ಎಂದರೆ ಹೌದು. ಸಾಕ್ಷಿಯು ಒಪ್ಪಿದ ಸದರಿ ಪೋಟೊವನ್ನು **ನಿಡಿ1** ಎಂದು ಗುರುತಿಸಲಾಯಿತು. ನಿಡಿ 1 ನ್ನು ಅಸಲು ದಾವಾ ಸಂಖ್ಯೆ 2162/2011 ರಲ್ಲಿ ಪ್ರತಿವಾದಿ ಪರ ಗುರುತಿಸಲಾಗಿರುತ್ತದೆ. ಸಾಕ್ಷಿಯು ಸ್ವತಃ ನಿಡಿ 1 ರಲ್ಲಿ ಕಾಣುವ ಸಿಮೆಂಟ್ ನ ಕಾಂಪೌಂಡ್ ಗೋಡೆಯನ್ನು ನಾನು ಹಾಕಿಸಿದ್ದು ಎನ್ನುತ್ತಾರೆ. ನಾನು ಹೂಡಿದ ದಾವೆಯಲ್ಲಿ ಬ್ರಹ್ಮೇಶ್ ಮನೆ ಕಟ್ಟಬಾರದು ಎಂದು ತಡೆಯಾಜ್ಞೆ ಆಗಿತ್ತು ಆದರೆ ಯಾವಾಗ ಎಂದು ಸರಿಯಾಗಿ ಗೊತ್ತಿಲ್ಲ.

13. ಬ್ರಹ್ಮೇಶ್ ರವರು ಹೂಡಿದ ದಾವೆಯಲ್ಲಿ ತಾತ್ಕಾಲಿಕ ತಡೆಯಾಜ್ಞೆ ಮುಂದುವರೆಯುತ್ತಿದೆ ಎಂದರೆ ಹೌದು. ಬ್ರಹ್ಮೇಶ್ ರವರು ನನ್ನ ಮೇಲೆ ಹೂಡಿದ ದಾವೆಯಲ್ಲಿ ಅವರಿಗೆ ತಾತ್ಕಾಲಿಕ ತಡೆಯಾಜ್ಞೆ ಇತ್ತು ಅದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದಿರಾ ಎಂದರೆ ಇಲ್ಲ. ನ್ಯಾಯಾಲಯದ ತಾತ್ಕಾಲಿಕ ತಡೆಯಾಜ್ಞೆಯ ಆದೇಶ ಮೇರೆಗೆ ಮತ್ತು ದಾಖಲೆಗಳ ಆದಾರದ ಮೇಲೆ ಬ್ರಹ್ಮೇಶ್ ರವರು ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಅವರು ಮನೆ ಕಟ್ಟಿಸಿದ್ದಾರೆ ಆದರೆ ನನಗೆ ಸೇರಿದ ಜಾಗದಲ್ಲಿ ಕಟ್ಟಿಸಿದ್ದಾರೆ ಎನ್ನುತ್ತಾರೆ.

14. ಬ್ರಹ್ಮೇಶ್ ರವರ ಸ್ವತ್ತಿನ ಸಂಖ್ಯೆ ಮತ್ತು ನನ್ನ ಸ್ವತ್ತಿನ ಸಂಖ್ಯೆ ಎರಡು ಬೇರೆ ಬೇರೆ ಎಂದರೆ ಸರಿ. ಸಾಕ್ಷಿಯು ಪುನಃ ಮುಂದುವರೆದು ನನಗೆ ಸೇರಿದ ಜಾಗದಲ್ಲಿ ಅವರು ಮನೆ ಕಟ್ಟಿಸಿದ್ದಾರೆ ಎನ್ನುತ್ತಾರೆ. ನಾನು ಹೂಡಿದ ದಾವೆಯಲ್ಲಿ ಪ್ರಾರಂಭಿಕ ಹಂತದಲ್ಲಿ ಬ್ರಹ್ಮೇಶ್ ರಿಂದ ದಾವಾ ಸ್ವತ್ತಿನ ಸ್ವಾಧೀನ ವನ್ನು ಬಿಡಿಸಿಕೊಡುವಂತೆ ಪ್ರಾರ್ಥನೆ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ನಾನು ಆ ರೀತಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ ಎನ್ನುತ್ತಾರೆ. ನಿಸಿ 1 ರಿಂದ 6 ದಾಖಲೆಗಳನ್ನು PDO ಮೂಖಾಂತರ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಹೌದು. ನಿಸಿ 1 ರಿಂದ 6 ದಾಖಲೆಗಳಲ್ಲಿ ನಿಮ್ಮ ಹೆಸರಾಗಲಿ ನಿಮ್ಮ ತಂದೆಯ ಹೆಸರಾಗಲಿ ಇಲ್ಲ, ಬ್ರಹ್ಮೇಶ್ ರವರ ಹೆಸರು ಇದೆ ಎಂದರೆ ಗೊತ್ತಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAMS030147022021/truecopy/order-2.pdf

15. ಸಿದ್ದಮ್ಮ ಕೋಂ ಸಿದ್ದಮಾದಯ್ಯರವರು ಸರ್ವೆ ನಂಬರ್ 163/1 ರ ಮೂಲ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಅವರು ಮತ್ತು ಅವರ ಕುಟುಂಬದವರು ಅವರ ಭಾಗಕ್ಕೆ ಬಂದ ಸ್ವತ್ತನ್ನು ಅಭಿವೃದಿ.ಗೊಳಿಸಲು ಅನ್ವರ್ ಎಂಬುವವರಿಗೆ GPA ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ GPA ಆಧಾರದ ಮೇಲೆ ಅನ್ವರ್ ರವರು ಜಮೀನನ್ನು ಅಭಿವೃದ್ಧಿ ಪಡಿಸಿ, ವಾಸದ ಯೋಗ್ಯ ಬಡಾವಣೆಯನ್ನಾಗಿ ಮಾಡಿ, ನಿವೇಶಗಳನ್ನಾಗಿ ವಿಂಗಡಿಸಿ, ಕಲ್ಪನಾ ಎಂಬುವವರು ಅನ್ವರ್ ಕಡೆಯಿಂದ ಅಸಲು ದಾವಾ ಸಂಖ್ಯೆ 2161/2011 ರಲ್ಲಿ ನಮೂದು ಮಾಡಿರುವ ದಾವಾ ಸ್ವತ್ತನ್ನು 1994 ರಇಸವಿಯಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ವರ್ಷ ಗಳ ಬಳಿಕ ಕಲ್ಪನಾ ಯೋಗರಾಜ ಎಂಬುವವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಯೋಗರಾಜ ಕಡೆಯಿಂದ ದಿನೇಶ್ ಎಂಬುವವರು ನೋಂದಾಯಿತ ಕ್ರಯ ಪತ್ರದ ಅಡಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಿನೇಶ್ ರವರಿಂದ ಬ್ರಹ್ಮೇಶ್ ರವರು ದಾವಾ ಸಂಖ್ಯೆ 2161/2011 ರ ಸ್ವತ್ತನ್ನು ದಿಃ 09.09.2011 ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಬ್ರಹ್ಮೇಶ್ ರವರು ಆಲನಹಳ್ಳಿ ಪಂಚಾಯಿತಿಯಿಂದ ನಿಪಿ 29 ರಿಂದ 32 ರವರಗೆ ದಾಖಲೆಗಳನ್ನು ಪಡೆದುಕೊಂಡು ಮನೆಯನ್ನು ಕಟ್ಟಿಸಲು ಪ್ರಾರಂಭ ಮಾಡಿರುತ್ತಾರೆ ಎಂದರೆ ಆ ಸಮಯದಲ್ಲಿ ನಾನು ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ. ಬ್ರಹ್ಮೇಶ್ ರವರು ಪಂಚಾಯಿತಿಯಿಂದ ಪಡೆದ ಪ್ಲಾನ್, ಪರವಾನಿಗೆ ಮತ್ತು ಖಾತಾ ಸರಿಯಿಲ್ಲ ರದ್ದು ಪಡಿಸಿ ಎಂದು ಪ್ರಶ್ನಿಸಿ ಪಂಚಾಯಿತಿಗೆ ನೋಟಸ್ ನ್ನು ಕೊಟ್ಟಿದ್ದಿರಾ ಎಂದರೆ ಇಲ್ಲ, ಈ ದಾವೆಯನ್ನು ಹಾಕ್ಕಿದೇನೆ ಎನ್ನುತ್ತಾರೆ. ಪಂಚಾಯಿತಿಯವರು ನನಗೆ ಸೇರಿದ ಸ್ವತ್ತಿಗೆ ಸಂಬಂದಪಟ್ಟದಂತೆ ಪ್ಲಾನ್, ಪರವಾನಿಗೆ ಮತ್ತು ಖಾತೆಯನ್ನು ಬ್ರಹ್ಮೇಶ್ ಗೆ ಕೊಟ್ಟಿದ್ದಾರೆ ಎಂದು PDO ಪಂಚಾಯಿತಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ನಾನು ಮತ್ತು ನನ್ನ ತಂದೆ ಆ ಲೇಔಟ್ ನಲ್ಲಿ ಎಲ್ಲಿ ಎಲ್ಲಿ ಖಾಲಿ ನಿವೇಶನ ಇದೇಯೋ ಅಲ್ಲಿ ಸೃಷ್ಟಿ ತ ಸುಳ್ಳು ದಾಖಲೆಗಳ ಆಧಾರ ಮೇಲೆ ಸುಳ್ಳು ದಾಖಲಗೆಳನ್ನು ಸೃಷ್ಟಿಸಿಕೊಂಡು ದಾವೆಯನ್ನು ಹಾಕುವುದು ನಿಮ್ಮ ಹವ್ಯಾಸ ಎಂದರೆ ಇಲ್ಲ, ನಾನು ರಿಯಲ್ estate ವ್ಯಾಪಾರ ಮಾಡುವುದಿಲ್ಲ ಎನ್ನುತ್ತಾರೆ. ನಾನು ಹೂಡಿರುವ ದಾವೆಯಲ್ಲಿ ಹಾಜರು ಪಡಿಸಿರುವ ನಿಪಿಂ 1 ರ ಕ್ರಯಪತ್ರದಲ್ಲಿ ಕಾಣುವ ಸ್ವತ್ತಿನ ಸಂಖ್ಯೆ ಮತ್ತು

This is a True Copy of the Court Records Online. Authenticated @ districts.ecourtsindia.com/cnr/KAMS030147022021/truecopy/order-2.pdf

ಚಕ್ಕುಬಂದಿ ಅಸ್ತಿತ್ವ ದಲ್ಲಿ  ಇಲ್ಲ ಅದು ಕಾಲ್ಪನಿಕ ಎಂದರೆ ಇಲ್ಲ. ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಬ್ರಹ್ಮೇಶ್ ಗೆ ಸೇರಿದ ಸ್ವತ್ತನ್ನು ಲಪಟಾಯಿಸಿಕೊಳ್ಳಲು ನಾನು ಮತ್ತು ನನ್ನ ತಂದೆ ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಇಲ್ಲ.

**ಮರುವಿಚಾರಣೆ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

12 ನೇ ಅಪರ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಮೈಸೂರು.

This is a True Copy of the Court Records Online. Authenticated @ districts.ecourtsindia.com/cnr/KAMS030147022021/truecopy/order-2.pdf

www.ecourtsindia.com